

# ಅಪ್ಲಿಕೇಶನ್ ಅಡಗುದಾಣ

ಒಎಸ್ ಎಕ್ಸ್‌ನಲ್ಲಿ ಬಹಳಷ್ಟು ವಿಶೇಷ ಅಂಶಗಳಿದ್ದರೂ ಒಮ್ಮೆಲೇ ಬಹು ವಿಂಡೋಗಳನ್ನು ತೆರೆದುಕೊಂಡರೆ ಯಾವುದರ ಮೇಲೆಯೂ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಿಲ್ಲ. ಹೀಗಾಗಿ ಫುಲ್‌ಸ್ಕ್ರೀನ್‌ನಲ್ಲಿ ವಿಂಡೋ ತೆರೆದುಕೊಂಡಿದ್ದರೆ, ಇತರ ಅಪ್ಲಿಕೇಶನ್‌ಗಳನ್ನು ಅಡಗಿಸಿ ಇಡಬೇಕಾಗುತ್ತದೆ. ಆದರೆ ನೀವು ಒಎಸ್ ಎಕ್ಸ್ ಡಾಕ್ ಅನ್ನು ತೆರೆದರೆ, ಅದು ಇಡೀ ಸ್ಕ್ರೀನ್ ತುಂಬಾ ಹರಡಿಕೊಳ್ಳುತ್ತದೆ. ಹೀಗಾಗಿ ವಿಂಡೋಗೆ ಯಾವುದೆ ತೊಂದರೆಯಾಗದಂತೆ ಉಳಿದ ಅಪ್ಲಿಕೇಶನ್‌ಗಳನ್ನು ಕಾಣದಂತೆ ಮಾಡಲು ಆಪ್ಶನ್–ಕಮಾಂಡ್– ಎಚ್ ಒತ್ತಿ. ಆಗಷ್ಟೇ ತೆರೆದಿರುವ ಅಪ್ಲಿಕೇಶನ್ ಅಡಗಿಸಿಡಲು ಕೇವಲ ಕಮಾಂಡ್– ಎಚ್ ಒತ್ತಿದರೆ ಸಾಕು.

ಇದಲ್ಲದೇ ಮೆನುನಲ್ಲಿರುವ ಆಯ್ಕೆಗಳಿಂದಲೂ ಇದನ್ನು ಮಾಡಬಹುದು. ಬಲಗಡೆ ಕ್ಲಿಕ್ ಮಾಡಿದರೆ ಅಪ್ಲಿಕೇಶನ್ ಮೆನು ತೆರೆದುಕೊಳ್ಳುತ್ತದೆ. ಇದರಲ್ಲಿ ಹೈಡ್ ಆಯ್ಕೆ ಕಾಣುತ್ತದೆ. ಒಮ್ಮೆ ಇವುಗಳನ್ನು ಅಡಗಿಸಿಟ್ಟರೆ ಸಾಕು, ಮಿನಿಮೈಜ್ ಆದ ವಿಂಡೋಗಳು ಕೂಡಾ ಡಾಕ್‌ನಿಂದ ಕಣ್ಮರೆಯಾಗುತ್ತವೆ. ಅಡಗಿಸಿಟ್ಟ ಅಪ್ಲಿಕೇಶನ್‌ಗಳನ್ನು ಮತ್ತೆ ತೆರೆಯಲು ಕಮಾಂಡ್– ಟ್ಯಾಬ್ ಒತ್ತಿ.



# ಬಹು ಬಳಕೆ ಔಟ್‌ಲುಕ್.ಕಾಮ್




ಔಟ್‌ಲುಕ್.ಕಾಮ್‌ನಿಂದ ಈಗ ಬೇರೆ ಇ–ಮೇಲ್ ವಿಳಾಸಗಳಿಂದಲೂ ಇ–ಮೇಲ್ ಕಳಿಸಬಹುದು. ಮುಂಚೆ ಈ ರೀತಿ ಕಳಿಸುವಾಗ 'ಆನ್ ಬಿಹಾಫ್ ಆಫ್' ಎಂದು ಬರುತ್ತಿತ್ತು. ಈಗ ಅದೆಲ್ಲ ಮಾಯವಾಗಿದ್ದು, ನೇರ ಕಳಿಸಬಹುದು. ಅಂದರೆ ಜಿ–ಮೇಲ್, ಯಾಹೂ ಮೇಲ್ ಮೊದಲಾದವುಗಳಿಂದ ಈ ಇ–ಮೇಲ್‌ಗಳು ಸೃಷ್ಟಿಯಾಗಿದ್ದರೂ ಔಟ್‌ಲುಕ್.ಕಾಮ್ ಮೂಲಕ ಆರಾಮವಾಗಿ ಯಾವುದೆ ಮುಜುಗರವಿಲ್ಲದೆ ಕಳಿಸಬಹುದು.

ಸೆಟಿಂಗ್ಸ್‌ಗೆ ಹೋಗಿ. 'ಮ್ಯಾನೇಜಿಂಗ್ ಯುವರ್ ಅಕೌಂಟ್'ನಲ್ಲಿ 'ಯುವರ್ ಮೇಲ್ ಅಕೌಂಟ್ಸ್' ಮೇಲೆ ಕ್ಲಿಕ್ ಮಾಡಿ. ನಂತರ 'ಆ್ಯಡ್ ಆ್ಯನ್ ಇ–ಮೇಲ್ ಅಕೌಂಟ್'ಗೆ ಹೋಗಿ, 'ಆ್ಯಡ್ ಎ ಸೆಂಡ್– ಆ್ಯಂಡ್– ರಿಸೀವ್ ಅಕೌಂಟ್' ಬಟನ್ ಮೇಲೆ ಕ್ಲಿಕ್ ಮಾಡಿ. ನಿಮ್ಮ ಇ–ಮೇಲ್ ಖಾತೆ ಮಾಹಿತಿ ನೀಡಿ. 'ನೆಕ್ಸ್ಟ್' ಮೇಲೆ ಕ್ಲಿಕ್ ಮಾಡಿ. ನಂತರ ಔಟ್‌ಲುಕ್.ಕಾಮ್‌ನಲ್ಲಿ ನಿಮ್ಮ ಬೇರೆ ಇ–ಮೇಲ್ ಅನ್ನು ಲಾಗಾನ್ ಆಗಬಹುದು.




# ಫೋರ್‌ಸ್ಕ್ವೇರ್

ಫೋರ್‌ಸ್ಕ್ವೇರ್ ಐಫೋನ್ ಹಾಗೂ ಆ್ಯಂಡ್ರಾಯ್ಡ್‌ಗಳಿಗಾಗಿ ಪರಿಷ್ಕೃತ ಅಪ್ಲಿಕೇಶನ್ ಬಿಡುಗಡೆ ಮಾಡಿದೆ. ಈ ಅಪ್ಲಿಕೇಶನ್‌ನಿಂದ ಈ ಹಿಂದೆ ಸ್ನೇಹಿತರು ಭೇಟಿ ನೀಡಿದ್ದ ಉಪಾಹಾರಗೃಹ, ಬಾರ್ ಅಥವಾ ಕಾಫಿಷಾಪ್‌ಗಳನ್ನು ಪತ್ತೆ ಮಾಡಬಹುದು. ಎಲ್ಲಿ ಯಾವ ರೀತಿಯ ತಿನಿಸು, ಎಷ್ಟು ಬೆಲೆಗೆ ಸಿಗುತ್ತದೆ ಎಂಬ ವಿವರಗಳನ್ನೂ ಪಡೆಯಬಹುದು.

# ಗೂಗ್ಲ್ ಕ್ಯಾಲೆಂಡರ್‌ಗೆ ರಂಗು

ಗೂಗ್ಲ್ ತನ್ನ ಕ್ಯಾಲೆಂಡರ್ ಅಪ್ಲಿಕೇಶನ್‌ಗೆ 24 ವಿವಿಧ ರಂಗುಗಳನ್ನು ನೀಡಿದ್ದು, ಬಳಕೆದಾರರು ದಿನಾಂಕ ಮತ್ತು ಘಟನೆಗಳನ್ನು ತಮ್ಮಿಷ್ಟದಂತೆ ಸಿದ್ಧಪಡಿಸಿಕೊಳ್ಳಬಹುದು. ಮುಖ್ಯವಾದ ದಿನಾಂಕವನ್ನು ಬಣ್ಣದಿಂದ ಎದ್ದು ಕಾಣುವಂತೆ ಮಾಡಬಹುದು.

ಹಾಗೆಯೇ ದಿನಾಂಕ ಮತ್ತು ಸಮಯವನ್ನು ಪುನರ್‌ವಿನ್ಯಾಸ ಮಾಡಲಾಗಿದ್ದು ಬಳಕೆದಾರರು ಕೆಲವು ಸಮಯ ಹಾಗೂ ಪಟ್ಟಿಯನ್ನು ನಿಗದಿತ ದಿನ, ವಾರ, ತಿಂಗಳುಗಳಲ್ಲಿ ಪುನರಾವರ್ತನೆಗೊಳ್ಳುವಂತೆ ಮಾಡಬಹುದು.




■ ಎಸ್. ತುಂಬೆ